# ಜ್ಞಾನದ ಹಂಬಲ

ಸ್ವಾಮಿ ನಿತ್ಯಸ್ಥಾನಂದ

ವಿದ್ಯಾರ್ಥಿಯ ಪ್ರಮುಖ ಗುಣವನ್ನು ಕುರಿತ ವಿಚಾರಗಳನ್ನು ವ್ಯಕ್ತಪಡಿಸಿರುವ ಲೇಖಕರು ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರು ಹಾಗೂ ಈ ಪತ್ರಿಕೆಯ ಪ್ರಥಮ ಸಂಪಾದಕರು. ವಿದ್ಯಾರ್ಥಿಜೀವನದಲ್ಲಿ ಪಡೆದ ಜ್ಞಾನದೊಂದಿಗೆ ನಂತರ ಜೀವನದಲ್ಲೂ ವಿವಿಧಮೂಲಗಳಿಂದ ಹೆಚ್ಚಿನ ಜ್ಞಾನವನ್ನು ಪಡೆಯಬೇಕು ಎಂಬ ಹಂಬಲವನ್ನು ಜಾಗ್ರತಗೊಳಿಸುವುದೇ ಈ ಲೇಖನದ ಉದ್ದೇಶ.

"ಮಾನವನ ಗುರಿ ಸುಖವಲ್ಲ, ಜ್ಞಾನ" (ಕೃತಿಶ್ರೇಣಿ, ೧.೨೭) ಎಂದು ಹೇಳುತ್ತಾರೆ ಸ್ವಾಮಿ ವಿವೇಕಾನಂದರು. ಸುಖವೇ ಗುರಿಯಾಗಿದ್ದಿದ್ದರೆ ಮಾನವನಾಗಿ ಹುಟ್ಟುವುದೇ ತಪ್ಪಾಗುತ್ತಿತ್ತು ಎಂಬುದು ಅವರ ಅಭಿಪ್ರಾಯ. ಪ್ರಾಣಿಗಳು ಇಂದ್ರಿಯಗಳಲ್ಲಿ ಸುಖವನ್ನು ಕಾಣುತ್ತವೆ. ಭೌತಿಕ ಹಂತಕ್ಕೆ ಮಾತ್ರ ಅವುಗಳ ಜೀವನ ಸೀಮಿತವಾಗಿರುತ್ತದೆ. ಮಾನವನಲ್ಲಿ ಮನಸ್ಸು ಹೆಚ್ಚು ವಿಕಾಸ ಹೊಂದಿರುತ್ತದೆ. ಆದ್ದರಿಂದ ಅವನು ಮನೋರಾಜ್ಯದಲ್ಲಿ ವಿಹರಿಸುತ್ತಾನೆ. ಇದರಿಂದ ವಿವಿಧ ಕಲೆಗಳು ಮತ್ತು ಜ್ಞಾನದ ವಿವಿಧ ಕ್ಷೇತ್ರಗಳು ಬೆಳವಣಿಗೆ ಹೊಂದಿದವು. ಆದ್ದರಿಂದ ಜ್ಞಾನವು ಮಾನವನ ಒಂದು ವಿಶಿಷ್ಟ ಲಕ್ಷಣ. ಕವಿ ಭರ್ತೃಹರಿ ಹೇಳುತ್ತಾನೆ: **ಸಂಗೀತಸಾಹಿತ್ಯ ಕಲಾವಿಹೀನಃ, ಸಾಕ್ಷಾತ್ಪಶುಃ ಪುಚ್ಛವಿಷಾಣಹೀನಃ**—"ಸಂಗೀತ ಸಾಹಿತ್ಯ ಕಲಾಭಿರುಚಿ ಇಲ್ಲದವನು ಬಾಲಕೊಂಬುಗಳಿಲ್ಲದ ಪ್ರತ್ಯಕ್ಷ ಪ್ರಾಣಿಯೇ."




ವಿದ್ಯಾರ್ಥಿಗಳಾದವರು ಜ್ಞಾನವನ್ನು ಪ್ರೀತಿಸಬೇಕು. ವಿದ್ಯಾರ್ಥಿ ಎಂಬ ಶಬ್ದದ ಅರ್ಥವೇ "ವಿದ್ಯೆಯನ್ನು ಅರಸುವವನು" ಎಂದು. ಜ್ಞಾನವನ್ನು ಪಡೆಯಬೇಕೆಂಬ ಆಸೆಯಿಂದ ಶಾಲೆಗೆ ಹೋಗುವವನು ನಿಜವಾದ ವಿದ್ಯಾರ್ಥಿ—ಹಣದ ಆಸೆಯಿಂದ ಉದ್ಯೋಗವನ್ನು ಬಯಸಿ ಕೇವಲ ಸರ್ಟಿಫಿಕೇಟಿಗಾಗಿಯೇ ಶಾಲೆ ಕಾಲೇಜುಗಳಿಗೆ ಹೋಗುವವರು ನಿಜವಾದ ಅರ್ಥದಲ್ಲಿ ವಿದ್ಯಾರ್ಥಿಗಳಲ್ಲ—ಅವರು ಜಾಬಾರ್ಥಿಗಳು. ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸುವುದೇ ಅವರ ಗುರಿಯಾಗಿರುತ್ತದೆ. ಹೀಗೆ ಪರೀಕ್ಷಾದೃಷ್ಟಿಯಿಂದಲೇ ಓದುವುದರಿಂದ ಪರೀಕ್ಷೆಯ ಭಯ ಕಾತರತೆಗಳಿಗೆ ಕಾರಣವಾಗುತ್ತದೆ. ನಮಗೆ ಜ್ಞಾನದಾಹ ಇರಬೇಕು. ಕೇವಲ ಪರೀಕ್ಷೆಗಾಗಿ ಮಾತ್ರ ಓದಬಾರದು. ಜ್ಞಾನಕ್ಕಾಗಿ ನಾವು ಓದಿದರೆ ನಮಗೆ ಜ್ಞಾನವೂ, ಪರೀಕ್ಷೆಯಲ್ಲಿ ಉತ್ತಮ ಅಂಕವೂ ಸಿಕ್ಕುತ್ತವೆ. ಆಗ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಲು ಸಾಧ್ಯವಾಗುತ್ತದೆ.

ಜ್ಞಾನಕ್ಕೆ ಪವಿತ್ರಗೊಳಿಸುವ ಶಕ್ತಿಯಿದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. "ಜ್ಞಾನಕ್ಕೆ ಸಮಾನವಾದ ಪವಿತ್ರವಾದುದು ಯಾವುದೂ ಇಲ್ಲ"ವೆಂದು ಭಗವದ್ಗೀತೆ ಹೇಳುತ್ತದೆ. ಜ್ಞಾನದ ಕಡೆ ತೀವ್ರ ಒಲವು ಇದ್ದರೆ ಮನಸ್ಸು ಕೀಳು ವಿಚಾರಗಳ ಕಡೆ ಹರಿಯುವುದಿಲ್ಲ. ಇದು ಉತ್ತಮ ಹಾಗೂ ಪವಿತ್ರ ಜೀವನ ನಡೆಸಲು ಸಹಾಯಕ ವಾಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಜ್ಞಾನದ ಏಕೈಕ ಮೌಲ್ಯವೆಂದರೆ, ಅದು ಮನಸ್ಸನ್ನು ಶಿಸ್ತುಬದ್ಧಾಗಿಯೂ, ಶಕ್ತಿಶಾಲಿಯಾಗಿಯೂ ಮಾಡುತ್ತದೆ." ಜ್ಞಾನವು ಮನಶ್ಶಕ್ತಿಯನ್ನು ಹೆಚ್ಚಿಸಬೇಕಾದರೆ ಅದನ್ನು ಸರಿಯಾದ ರೀತಿಯಲ್ಲಿ ಅರಗಿಸಿಕೊಳ್ಳಬೇಕು. ಆಹಾರವನ್ನು ಸರಿಯಾಗಿ ಜೀರ್ಣಿಸಿಕೊಂಡಾಗ ಮಾತ್ರ ಅದು ದೇಹಕ್ಕೆ ಶಕ್ತಿಯನ್ನೂ ಪೌಷ್ಟಿಕತೆಯನ್ನೂ ನೀಡುತ್ತದೆ. ಇಲ್ಲದಿದ್ದರೆ ಅಜೀರ್ಣರೋಗಕ್ಕೆ ಕಾರಣವಾಗುತ್ತದೆ. ಆದ್ದರಿಂದಲೇ ವಿವೇಕಾನಂದರು ಹೇಳುತ್ತಾರೆ: "ವಿದ್ಯಾಭ್ಯಾಸವೆಂದರೆ ವಿಷಯಸಂಗ್ರಹಣೆಯಲ್ಲ; ನಿಮ್ಮ ಮಿದುಳಿನಲ್ಲಿ ಅಸ್ತವ್ಯಸ್ತವಾಗಿ, ಅಸಂಬದ್ಧವಾಗಿ ಹರಿದಾಡುವ ವಿಚಾರಧಾರೆಗಳಲ್ಲ. ಜೀವನವನ್ನು ಉತ್ತಮಗೊಳಿಸುವ ಪುರುಷಸಿಂಹರನ್ನು ಮಾಡುವ ವಿದ್ಯೆ ಬೇಕು. ಐದು ವಿಷಯಗಳನ್ನು ನೀವು ಅರ್ಥಮಾಡಿಕೊಂಡು, ಅದನ್ನು ನಿಮ್ಮ ಜೀವನದಲ್ಲಿ ಕಾರ್ಯರೂಪಕ್ಕೆ ತಂದು, ಅದರಿಂದ ಶೀಲವನ್ನು ರೂಪಿಸಿಕೊಂಡಿದ್ದರೆ ಒಂದು ಪುಸ್ತಕ ಭಂಡಾರವನ್ನೇ ಕಂಠಪಾಠ ಮಾಡಿದ ಪಂಡಿತನಿಗಿಂತಲೂ ನೀವು ಮೇಲು. ಕೇವಲ ವಿಷಯಸಂಗ್ರಹಣೆಯೇ ವಿದ್ಯಾಭ್ಯಾಸವಾಗಿದ್ದರೆ, ಪ್ರಪಂಚದಲ್ಲಿ ಪುಸ್ತಕಭಂಡಾರಗಳೇ ಮಹಾಮುನಿಗಳಾಗುತ್ತಿದ್ದವು, ವಿಶ್ವಕೋಶಕೋಶಗಳು ಮಹಾಋಷಿಗಳಾಗುತ್ತಿದ್ದವು."

ಸಂಸ್ಕೃತಿ, ನಾಗರಿಕತೆಗಳು ಬೆಳೆದಿರುವುದೇ ಜ್ಞಾನದ ಹಂಬಲದಿಂದ. ವಿಜ್ಞಾನ ಹಾಗೂ ತಾಂತ್ರಿಕತೆ ಬೆಳೆದಿರುವುದೇ ಜ್ಞಾನದ ಹಂಬಲದಿಂದ. ಅನೇಕ ವಿಜ್ಞಾನಿಗಳು ವಸ್ತುಗಳ, ಘಟನೆಗಳ ರಹಸ್ಯವನ್ನು ತಿಳಿದುಕೊಳ್ಳಬೇಕೆಂಬ ಹಂಬಲದಿಂದ ಅನೇಕ

ಸಂಶೋಧನೆಗಳನ್ನು ನಡೆಸಿ ಹೊಸ ಹೊಸ ಆವಿಷ್ಕಾರಗಳನ್ನು ಮಾಡಿದರು. ಇದರಿಂದ ವಿಜ್ಞಾನ ಬೆಳೆಯಿತು, ಹೊಸ ಹೊಸ ಜ್ಞಾನಶಾಖೆಗಳು ಉದಯವಾದವು, ಮತ್ತು ಇದರ ಪರಿಣಾಮವಾದ ತಾಂತ್ರಿಕತೆಯ ಎಲ್ಲ ಸೌಲಭ್ಯಗಳನ್ನೂ ಈಗ ನಾವು ಅನುಭವಿಸುತ್ತಿದ್ದೇವೆ. ಈ ಪ್ರಗತಿ ಮುಂದುವರಿಯ ಬೇಕಾದರೆ ನಾವು ಜ್ಞಾನದ ಹಂಬಲವನ್ನು ಹೊಂದಿರಬೇಕು. ಉಪಾಧ್ಯಾಯರು ಬೋಧಿಸುವಾಗ ವಿದ್ಯಾರ್ಥಿಗಳಲ್ಲಿ ಜ್ಞಾನದ ಹಂಬಲವನ್ನು ಕೆರಳಿಸಬೇಕು. ಒಂದು ಆಂಗ್ಲ ಹೇಳಿಕೆಯ ಪ್ರಕಾರ ಉತ್ತಮ ಉಪಾಧ್ಯಾಯನು ವಿದ್ಯಾರ್ಥಿಗಳಿಗೆ ಕುಡಿಯುವುದಕ್ಕೆ ಏನನ್ನಾದರೂ ನೀಡುವುದರ ಬದಲು ಅವರ ಬಾಯಾರಿಕೆಯನ್ನು ಹೆಚ್ಚಿಸುತ್ತಾನೆ. ಅಂದರೆ ಉತ್ತಮ ಉಪಾಧ್ಯಾಯನು ತಾನು ಪಾಠಮಾಡುವ ವಿಧಾನದ ಮೂಲಕ ವಿದ್ಯಾರ್ಥಿಗಳಲ್ಲಿ ಜ್ಞಾನದಾಹವನ್ನು ಹೆಚ್ಚಿಸುತ್ತಾನೆ.

ಈ ದಾಹವಿದ್ದರೆ ಹೆಚ್ಚು ಹೆಚ್ಚು ತಿಳಿಯಬೇಕೆನಿಸುತ್ತದೆ, ಹೆಚ್ಚು ಆಳವಾಗಿ ತಿಳಿಯಬೇಕೆನಿಸುತ್ತದೆ. ಆಗ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಅನೇಕಾನೇಕ ಪ್ರಶ್ನೆಗಳು ಏಳುತ್ತವೆ. ಆ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುತ್ತ ಹೆಚ್ಚು ಹೆಚ್ಚು ಜ್ಞಾನವನ್ನು ಪಡೆಯುತ್ತಾ ಹೋಗುತ್ತಾರೆ. ಆಗ ಬುದ್ಧಿಯೂ ಹೆಚ್ಚು ಬೆಳೆಯುತ್ತ ಹೋಗುತ್ತದೆ, ಮತ್ತು ಪಿಶಾಲವಾಗುತ್ತದೆ. ಹೀಗೆ ಪ್ರಶ್ನಿಸುವುದರ ಮೂಲಕ, ಆಳ ಚಿಂತನೆಯ ಮೂಲಕ ಜ್ಞಾನವು ಸರಿಯಾಗಿ ಜೀರ್ಣಿಸಲ್ಪಟ್ಟು ಮನಶ್ಶಕ್ತಿಯನ್ನು ವರ್ಧಿಸುತ್ತದೆ. ಆದ್ದರಿಂದಲೇ ಜ್ಞಾನವನ್ನು ಒಂದು ಶಕ್ತಿ ಎಂದು ಕರೆದಿರುವುದು. ಈ ರೀತಿ ಮನಶ್ಶಕ್ತಿಯ ವೃದ್ಧಿಯಿಂದ ವ್ಯಕ್ತಿಯು ಆತ್ಮನಿಗ್ರಹವನ್ನು ಹೊಂದುತ್ತಾನೆ, ಅಂದರೆ ತನ್ನ ಇಂದ್ರಿಯಗಳು, ಆಲೋಚನೆಗಳು, ಆಸೆ ಪ್ರಲೋಭನೆಗಳು, ಭಾವೋದ್ವೇಗಗಳು—ಇವುಗಳನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಳ್ಳುತ್ತಾನೆ. ಇದೇ ನಿಜವಾದ ಚಾರಿತ್ರ್ಯ ಶಕ್ತಿ. ಇದರಿಂದ ಅವನು ಸ್ವತಂತ್ರ ಪ್ರವೃತ್ತಿಯುಳ್ಳವನಾಗುತ್ತಾನೆ. ಕೇವಲ ಭೌತಿಕವಾಗಿ ಮಾತ್ರವಲ್ಲ, ಮಾನಸಿಕವಾಗಿಯೂ ಅವನು ಸ್ವತಂತ್ರ ವ್ಯಕ್ತಿಯಾಗುತ್ತಾನೆ. ಭೌತಿಕವಾಗಿ ಅವನು ತನ್ನ ಸ್ವಂತ ಶಕ್ತಿಯಿಂದ ದುಡಿದು ಪರಾವಲಂಬಿಯಾಗದೆ ತನ್ನ ಕಾಲಮೇಲೆ ತಾನು ನಿಲ್ಲುತ್ತಾನೆ. ಮಾನಸಿಕವಾಗಿಯೂ ಇತರರ ಪ್ರೀತಿ, ಸಹಾನುಭೂತಿ, ಪ್ರಶಂಸೆ ಇತ್ಯಾದಿಗಳಿಗಾಗಿ ಹಾತೊರೆಯದೆ ಸ್ವತಂತ್ರನಾಗಿರುತ್ತಾನೆ, ಅಷ್ಟೇ ಅಲ್ಲದೆ ಇವುಗಳನ್ನು ಇತರರಿಗೆ ತಾನೇ ನೀಡುವ ಸ್ಥಿತಿಯಲ್ಲಿರುತ್ತಾನೆ. ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಯಾವ ವಿದ್ಯಾಭ್ಯಾಸದಿಂದ ಒಳ್ಳೆಯ ಶೀಲ ನಮ್ಮಲ್ಲಿ ಬೆಳೆಯುವುದೊ, ಮಾನಸಿಕ ಶಕ್ತಿ ಹೆಚ್ಚುವುದೊ, ಬುದ್ಧಿ ವಿಶಾಲವಾಗುವುದೊ, ಯಾವುದರ ಸಹಾಯದಿಂದ ವ್ಯಕ್ತಿ ಸ್ವತಃ ತನ್ನ ಕಾಲಮೇಲೆ ನಿಲ್ಲಬಲ್ಲನೊ ಅಂತಹ ವಿದ್ಯೆ ನಮಗೆ ಬೇಕಾಗಿರುವುದು."

ಒಂದು ಕಾಲದಲ್ಲಿ ಭಾರತವು ಜ್ಞಾನಕ್ಕೆ ಪ್ರಸಿದ್ಧವಾಗಿತ್ತು. ನಲಂದಾ, ತಕ್ಷಶಿಲಾ ಮುಂತಾದ ಜಗತ್ಪ್ರಸಿದ್ಧ ವಿಶ್ವವಿದ್ಯಾನಿಲಯಗಳು ನಮ್ಮಲ್ಲಿದ್ದವು. ಪ್ರಪಂಚದ ನಾನಾ ಭಾಗಗಳಿಂದ ವಿದ್ಯಾರ್ಥಿಗಳು ಇಲ್ಲಿಗೆ ಜ್ಞಾನವನ್ನು ಪಡೆಯಲು ಬರುತ್ತಿದ್ದರು. ಹುಯಿಂತ್ಸಾಂಗ್ ಎಂಬ ಚೈನೀ ಯಾತ್ರಿಕನು ಭಾರತಕ್ಕೆ ಬಂದನು—ಪ್ರೇಕ್ಷಣೀಯ ಸ್ಥಳಗಳನ್ನು ನೋಡುವುದಕ್ಕಲ್ಲ, ಜ್ಞಾನ ಸಂಪಾದನೆಗೆ. ಅವನು ದೇಶದ ನಾನಾ ಭಾಗಗಳಿಗೆ ಭೇಟಿ ನೀಡಿ ಅನೇಕ ಗ್ರಂಥಗಳನ್ನು ಸಂಗ್ರಹಿಸಿ ಅವುಗಳ ಪ್ರತಿ ಮಾಡಿಕೊಂಡು, ಒಂದು ದೊಡ್ಡ ಗ್ರಂಥರಾಶಿಯನ್ನು ಹೊತ್ತುಕೊಂಡು ತನ್ನ ಶಿಷ್ಯರಸಮೇತನಾಗಿ ತನ್ನ ದೇಶಕ್ಕೆ ಹಿಂತಿರುಗುತ್ತಿದ್ದನು. ದಾರಿಯಲ್ಲಿ ಒಂದು ದೊಡ್ಡ ನದಿ ಎದುರಾಯಿತು. ದೋಣಿಯ ಮೂಲಕ ಆ ನದಿಯನ್ನು ದಾಟುತ್ತಿರುವಾಗ ಬಿರುಗಾಳಿ ಪ್ರಾರಂಭವಾಯಿತು. ದೋಣಿ ಜೋರಾಗಿ ತೂರಾಡುತ್ತಿದೆ, ಇನ್ನೇನು ಮುಳುಗುವ ಸ್ಥಿತಿಯಲ್ಲಿದೆ. ಆಗ ದೋಣಿ ನಡೆಸುತ್ತಿದ್ದ ಅಂಬಿಗ ಹೇಳಿದ: "ಸ್ವಾಮಿ, ಇಷ್ಟೊಂದು ಪುಸ್ತಕಗಳ ಹೊರೆ ದೋಣಿಯಲ್ಲಿರುವಾಗ ದೋಣಿ ಮುಳುಗುವುದು ನಿಶ್ಚಯ. ಈ ಪುಸ್ತಕಗಳನ್ನು ನೀರಿಗೆ ಎಸೆದುಬಿಟ್ಟರೆ, ನಾವು ಸುರಕ್ಷಿತವಾಗಿ ಆಚೆಯ ದಡವನ್ನು ಸೇರಬಹುದು." ಇದನ್ನು ಕೇಳಿದ ಶಿಷ್ಯರು, "ಛೇ ಛೆ! ಇಂಥ ಜ್ಞಾನಭಂಡಾರವನ್ನು ಕಳೆದುಕೊಳ್ಳುವುದುಂಟೇ! ಈ ಜ್ಞಾನವು ನಮ್ಮ ದೇಶಕ್ಕೆ ಹೋದರೆ ಅನೇಕರಿಗೆ ಪ್ರಯೋಜನವಾಗುತ್ತದೆ, ದೇಶ ಪ್ರಗತಿ ಹೊಂದುತ್ತದೆ. ಆದ್ದರಿಂದ ನಾವೇ ನೀರಿಗೆ ಹಾರಿಬಿಡೋಣ, ಗ್ರಂಥಗಳು ಉಳಿಯಲಿ" ಎಂದು ಪರಸ್ಪರ ಮಾತನಾಡಿಕೊಂಡು ಎಲ್ಲರೂ ಒಮ್ಮೆಗೇ ನೀರಿಗೆ ಹಾರಿಬಿಟ್ಟರು—ಜ್ಞಾನವನ್ನು ಉಳಿಸಲು ಪ್ರಾಣವನ್ನು ಬಲಿಕೊಟ್ಟರು. ಈ ರೀತಿ ನಾವು ಜ್ಞಾನವನ್ನು ಗೌರವಿಸಬೇಕು, ಪ್ರೀತಿಸಬೇಕು.

### ಜ್ಞಾನ ಎಲ್ಲಿಂದ ಬಂದಿದೆ?

ಜ್ಞಾನವೆಂಬುದು ಮನುಷ್ಯನಲ್ಲಿಯೇ ಅಡಗಿರುವುದು. ಹೊರಗಿನಿಂದ ಯಾವ ಜ್ಞಾನವೂ ಬರುವುದಿಲ್ಲ. ಅದೆಲ್ಲವೂ ಒಳಗೇ ಇರುವುದು... ನ್ಯೂಟನ್ನನು ಗುರುತ್ವಾಕರ್ಷಣವನ್ನು ಕಂಡುಹಿಡಿದನೆಂದು ನಾವು ಹೇಳುತ್ತೇವಲ್ಲವೇ? ಅದೇನು ಎಲ್ಲಿಯೋ ಒಂದು ಮೂಲೆಯಲ್ಲಿ ಕುಳಿತುಕೊಂಡು ನ್ಯೂಟನ್ನನು ತನ್ನನ್ನು ಕಂಡು ಹಿಡಿಯುವುದಕ್ಕೆ ಬರುವನೆಂದು ಕಾಯುತ್ತಿದ್ದಿತೇನು? ಅದು ಆತನ ಮನಸ್ಸಿನಲ್ಲಿಯೇ ಇದ್ದಿತು, ಸಮಯ ಬಂದಿತು, ಆಗ ಅದು ಬಯಲಾಯಿತು, ಎಂದರೆ ಆತನಿಗೆ ಜ್ಞಾನ ಹೊಳೆಯಿತು. ಜಗತ್ತು ಗಳಿಸಿರುವ ಜ್ಞಾನವೆಲ್ಲವೂ ಮನಸ್ಸಿನಿಂದ ಬಂದುದೇ. ಜಗತ್ತಿನ ಅನಂತ ಪುಸ್ತಕ ಭಂಡಾರವೆಲ್ಲ ನಿಮ್ಮ ಮನಸ್ಸಿನಲ್ಲಿಯೇ ಇದೆ. ಬಾಹ್ಯಪ್ರಪಂಚವೆಂಬುದು ಸೂಚನೆ ಮಾತ್ರ, ಅದು ನಿಮ್ಮ ಮನಸ್ಸನ್ನು ವಿಚಾರ ಮಾಡುವಂತೆ ಪ್ರೇರೇಪಿಸುವುದು. – ಸ್ವಾಮಿ ವಿವೇಕಾನಂದ